ದಿನಾಂಕಃ 14-08-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ</u>- 1 ರಿಂದ 4 ನೇ ಪ್ರತಿವಾದಿಯರ ಪರವಾಗಿ ಶ್ರೀ. ಎಂ.ಎಸ್.ಜಿ. ವಕೀಲರಿಂದಃ-**

ಮೃತ ಪುರುಷೋತ್ತಮರವರು ನನ್ನನ್ನು ನಮ್ಮ ಮನೆಯ ಹತ್ತಿರ ಹಣ ಕೊಡುವಂತೆ ಕೇಳಿದರು. ನಾನು ಹಣ ಕೊಡುವುದಕ್ಕಿಂತ 2 ರಿಂದ 3 ತಿಂಗಳ ಹಿಂದಿನಿಂದಲೂ ಸಹ ನನ್ನನ್ನು ಹಣ ಕೊಡುವಂತೆ ಕೇಳುತ್ತಿದ್ದರು. ಆ ಸಮಯದಲ್ಲಿ ಪುರುಷೋತ್ತಮರವರು ಒಬ್ಬರೇ ಇದ್ದರು. ಪುರುಷೋತ್ತಮರವರು ನನ್ನನ್ನು ಹಣ ಕೇಳಿದ ಸಮಯದಲ್ಲಿ ಅವರ ಕುಟುಂಬದಲ್ಲಿ ಅವರ ಅಕ್ಕ, ಅವರ ಹೆಂಡತಿ ಮತ್ತು ಮಕ್ಕಳುಗಳು ಇದ್ದರು. ಪುರುಷೋತ್ತಮರವರ ಅಕ್ಕನ ಹೆಸರು ಭಾಗ್ಯಮ್ಮ ಎಂಬುದಾಗಿದ್ದು, ಅವರಿಗೆ ಮದುವೆ ಆಗಿತ್ತೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಪುರುಷೋತ್ತಮರವರ ಅಕ್ಕನಿಗೆ ಆರೋಗ್ಯ ಸರಿ ಇಲ್ಲದೆ ಇರುವ ಕಾರಣ ಮತ್ತು ಅವರ ಹೆಂಡತಿಯ ಹೆರಿಗೆಗೆ ಬೇಕಾದ ಖರ್ಚಿಗೋಸ್ಕರ ನನ್ನನ್ನು ಹಣ ಕೇಳಿದರು. ಮೃತ ಪ್ರತಿವಾದಿ ಹಣ ಕೇಳಿದ ಸಮಯದಲ್ಲಿ ಅವರ ಹೆಂಡತಿ ಮತ್ತು ಮಕ್ಕಳುಗಳನ್ನು ನಾನು ವಿಚಾರಿಸಿರುವುದಿಲ್ಲ. ಹಣವನ್ನು ನಾನು ಉಪನೊಂದಣಾಧಿಕಾರಿಗಳ ಕಚೇರಿಯ ಬಳಿ ಪುರುಷೋತ್ತಮರವರಿಗೆ ಕೊಟ್ಟೆನು. ಆ ಹಣ ನನ್ನ ಬಳಿ ಇತ್ತು ಮತ್ತು ಬೇರೆಯವರ ಮೂಲಕ ಸ್ವಲ್ಪ ಸಾಲ ಮಾಡಿ ಪುರುಷೋತ್ತಮರವರಿಗೆ ಕೊಟ್ಟಿದ್ದೆನು. ಆ ಹಣವನ್ನು ನಾನು ಯಾರು ಬಳಿ

ಪಡೆದುಕೊಂಡು ಬಂದು ಕೊಟ್ಟೆನು ಎಂಬುದು ನನಗೆ ಈಗ ನೆನಪಿಲ್ಲ. ನಾನು ಪುರುಷೋತ್ತಮರವರಿಗೆ ರೂ.500 ಮುಖ ಬೆಲೆಯ ನೋಟುಗಳನ್ನು ಕೊಟ್ಟೆನು. ಪುರುಷೋತ್ತಮರವರ ಊರು ಬೂರ್ಕನಹಟ್ಟಿ ಗ್ರಾಮವಾಗಿರುತ್ತವೆ.

ಪುರುಷೋತ್ತಮರವರ ಅಕ್ಕನಿಗೆ ಚಿಕಿತ್ಸೆಯಾಗಿತ್ತು ಎಂಬ ವಿಚಾರವನ್ನು ನನಗೆ ತಿಳಿಸಿದ್ದರು, ಆದರೆ ಈ ಬಗ್ಗೆ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇರುವುದಿಲ್ಲ. ಅವರ ಅಕ್ಕ ಈಗ ಮೃತಪಟ್ಟಿರುತ್ತಾರೆ. ಅವರ ಅಕ್ಕ ಯಾವ ರೀತಿ ಮೃತಪಟ್ಟರು ಎಂಬುದು ನನಗೆ ಗೊತ್ತಿಲ್ಲ. ಪುರುಷೋತ್ತಮರವರು ತಮ್ಮ ಹೆಂಡತಿಯ 2 ನೇ ಹೆರಿಗೆಗೆ ಹಣ ಪಡೆದುಕೊಂಡರು. ದಿಃ 03.03.2020 ರ ನೋಟೀಸ್ ಕಳುಹಿಸುವುದಕ್ಕಿಂತ ಒಂದು ವಾರ ಮೊದಲೇ ಮೃತ ಪುರುಷೋತ್ತಮರವರನ್ನು ಹಣ ವಾಪಸ್ಸು ಕೊಡುವಂತೆ ಕೇಳಿದ್ದೆನು. ಆ ನೋಟೀಸನ್ನು ಅವರ ಮನೆಯ ವಿಳಾಸಕ್ಕೆ ಕಳುಹಿಸಿರುತ್ತೇನೆ. ಅಲ್ಲದೇ ಅದೇ ದಿನ ಅವರ ಅಕ್ಕನ ವಿಳಾಸಕ್ಕೂ ಸಹ ನೋಟೀಸ್ ಕಳುಹಿಸಿರುತ್ತೇನೆ. ಆ ನೋಟೀಸ್ ಗಳ ಪೈಕಿ ಒಂದು ನೋಟೀಸ್ ಖುದ್ದು ಜಾರಿಯಾಗಿದ್ದು, ಉಳಿದ ಎರಡು ನೋಟೀಸ್ ಗಳು ವಾಪಸ್ಸು ಬಂದಿರುತ್ತವೆ. ಅವರ ಅಕ್ಕನ ಮನೆಯ ವಿಳಾಸಕ್ಕೆ ಖುದ್ದು ಜಾರಿಯಾಗಿದ್ದು, ಪುರುಷೋತ್ತಮರವರ ಮನೆಯ ವಿಳಾಸಕ್ಕೆ ಜಾರಿಯಾಗದೇ ವಾಪಸ್ಸು ಬಂದಿರುತ್ತವೆ. ಪುರುಷೋತ್ತಮರವರ ಅಕ್ಕ ಭಾಗ್ಯಮ್ಮನವರು ಸ್ವತಃ ಅಕ್ಕನೋ ಅಥವಾ ಅಲ್ಲವೋ ಎಂಬುದು ನನಗೆ ಗೊತ್ತಿಲ್ಲ. ದಿಃ 04.05.2020 ರಂದು ಮೃತ

ಪುರುಷೋತ್ತಮರವರು ನನಗೆ ಮರು ಉತ್ತರ ನೋಟೀಸ್ ನೀಡಿದ್ದಾರೆ ಎಂದರೆ ಸರಿ. ಆ ಮರು ಉತ್ತರದ ನೋಟೀಸ್‌ನಲ್ಲಿರುವ ವಿಚಾರವನ್ನು ಓದಿ ತಿಳಿದುಕೊಂಡಿರುತ್ತೇನೆ. ಪುರುಷೋತ್ತಮರವರು ನೀಡಿದ ಮರು ಉತ್ತರಕ್ಕೆ ನಾನು ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ ಬದಲಾಗಿ ಈ ದಾವೆಯನ್ನು ಸಲ್ಲಿಸಿರುತ್ತೇನೆ.

ಪುರುಷೋತ್ತಮರವರು ಮರು ಉತ್ತರ ನೀಡಿದ ಎಷ್ಟು ದಿನಗಳೊಳಗಾಗಿ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂಬುದು ನನಗೆ ಗೊತ್ತಿಲ್ಲ. ಪುರುಷೋತ್ತಮರವರು ಮರು ಉತ್ತರ ನೀಡಿದ 3 ವರ್ಷಗಳ ನಂತರ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪುರುಷೋತ್ತಮರವರು ಕೋರೋನ ಸಮಯದಲ್ಲಿ ಮೃತಪಟ್ಟರು. ಪುರುಷೋತ್ತಮರವರು ಬದುಕಿದ್ದಾಗಲೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದೇನೆ. ಈ ಬಗ್ಗೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಪುರುಷೋತ್ತಮರವರು ಮೃತಪಟ್ಟ ನಂತರ ಅವರ ಹೆಂಡತಿ ಮಕ್ಕಳುಗಳನ್ನು ಈ ಬಗ್ಗೆ ವಿಚಾರ ಮಾಡಿರುವುದಿಲ್ಲ. ಅದೇ ರೀತಿ ಅವರುಗಳಿಗೆ ಯಾವುದೇ ಲಿಖಿತ ನೋಟೀಸ್ ನೀಡಿರುವುದಿಲ್ಲ. ಪ್ರತಿವಾದಿಯರು ಸಲ್ಲಿಸಲಾದ ಲಿಖಿತ ಹೇಳಿಕೆಯಲ್ಲಿನ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ದಾವಾ ಆಸ್ತಿಗಳು ಮಧುಗಿರಿ ಮುಖ್ಯ ರಸ್ತೆಯಲ್ಲಿರುವ ಅಂಗಡಿ ಮಳಿಗೆಗಳು ಎಂದರೆ ಸರಿ. ದಾವಾ ಆಸ್ತಿಯಲ್ಲಿ ಒಟ್ಟು 2 ಅಂಗಡಿಗಳು ಮತ್ತು ಒಂದು ವಾಸದ ಮನೆ ಇದೆ.

ದಾವಾ ಆಸ್ತಿಯಲ್ಲಿ 3 ಅಂಗಡಿ ಮಳಿಗೆಗಳು ಮತ್ತು 2 ವಾಸದ ಮನೆಗಳು ಇವೆ ಎಂದರೆ ಸರಿಯಲ್ಲ. ಆ ಅಂಗಡಿಗಳಿಂದ ತಿಂಗಳಿಗೆ ಒಟ್ಟು ರೂ.15,000/- ಬಾಡಿಗೆ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ಪುರುಷೋತ್ತಮರವರು ಜೂಜಾಟ ಆಡುತ್ತಿದ್ದೆವು ಎಂದರೆ ಸರಿಯಲ್ಲ. ಪುರುಷೋತ್ತಮರವರು ಕೊರೋನಾದಿಂದ ಮೃತಪಟ್ಟರು. ಪುರುಷೋತ್ತಮರವರು ಜೂಜಾಟ ಚಟಕ್ಕೆ ಬಲಿಯಾಗಿ ಮಧ್ಯಪಾನ ಮಾಡಿ ಆರೋಗ್ಯ ಕೆಟ್ಟು ಮೃತಪಟ್ಟರು ಎಂದರೆ ನನಗೆ ಗೊತ್ತಿಲ್ಲ.

ನಾನು ಪುರುಷೋತ್ತಮರವರಿಗೆ ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ಹಣ ಕೊಟ್ಟಾಗ ಪುರುಷೋತ್ತಮ, ಜಯಶಂಕರ್ ಮತ್ತು ಇನ್ನೂ ಒಬ್ಬರು ಸಾಕ್ಷಿದಾರರು ಇದ್ದರು. ಆ ಸ್ಥಳದಲ್ಲಿದ್ದ ಮತ್ತೊಬ್ಬ ವ್ಯಕ್ತಿ ರಂಗಪ್ಪ ಎಂಬುವವರಾಗಿದ್ದು, ಇನ್ನೊಬ್ಬರ ಹೆಸರು ನನಗೆ ಗೊತ್ತಿಲ್ಲ. ಆ ಸಾಕ್ಷಿದಾರರನ್ನು ಪುರುಷೋತ್ತಮರವರೇ ಅಲ್ಲಿಗೆ ಕರೆಸಿದ್ದರು. ಜಯಶಂಕರ್ ರವರು ಹೆಚ್.ಕೆ.ವಿ. ರೆಡ್ಡಿ ವಕೀಲರ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ನಾನು ಹೆಚ್.ಕೆ.ವಿ. ರೆಡ್ಡಿ ವಕೀಲರ ಮೂಲಕ ಪುರುಷೋತ್ತಮರವರಿಗೆ ಕಾನೂನುಬದ್ಧ ನೋಟೀಸ್ ಕೊಡಿಸಿದ್ದೆನು. ಈ ದಾವೆಯನ್ನೂ ಸಹ ಹೆಚ್.ಕೆ.ವಿ. ರೆಡ್ಡಿಯವರೇ ಸಲ್ಲಿಸಿರುತ್ತಾರೆ. ಹೆಚ್.ಕೆ.ವಿ. ರೆಡ್ಡಿಯವರ ಕಚೇರಿಯಲ್ಲಿ ಜಯಶಂಕರ್ ರವರು ಸುಮಾರು 30 ವರ್ಷಗಳಿಂದ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು

ಜಯಶಂಕರ್ ರವರು ಕೂಡಿಕೊಂಡು ಈ ಬೋಗ್ಯ ಪತ್ರವನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಪುರುಷೋತ್ತಮರವರಿಗೆ ಅಂಗಡಿ ಮಳಿಗೆಗಳು ಮತ್ತು ಜಮೀನಿನಿಂದ ಸಾಕಷ್ಟು ಆದಾಯ ಬರುತ್ತಿದ್ದು, ಅವರಿಗೆ ಹಣದ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಪುರುಷೋತ್ತಮರವರ ಅಕ್ಕನ ಆಸ್ಪತ್ರೆಯ ಖರ್ಚಿಗೆ ಮತ್ತು ಅವರ ಹೆಂಡತಿಯ ಹೆರಿಗೆ ಖರ್ಚಿಗೆ ಹಣ ತೆಗೆದುಕೊಂಡಿದ್ದಾರೆ ಎಂದು ಈ ದಾವೆಯಲ್ಲಿ ಹೇಳಿರುವುದಿಲ್ಲ. ಪುರುಷೋತ್ತಮರವರಿಗೆ ಅಷ್ಟು ಮೊತ್ತದ ಹಣ ಕೊಡುವ ಸಾಮರ್ಥ್ಯ ನನಗೆ ಇರಲಿಲ್ಲ ಎಂದರೆ ಸರಿಯಲ್ಲ. ಪುರುಷೋತ್ತಮರವರಿಗ ಮದ್ಯಪಾನ ಮಾಡುವ ಚಟ ಇದ್ದ ಕಾರಣ ನಾನು, ಪತ್ರ ಬರಹಗಾರರು ಹಾಗೂ ಸಾಕ್ಷಿದಾರರು ಕೂಡಿಕೊಂಡು ಈ ದಾಖಲೆಯನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆ ಕಾರಣ ಪ್ರತಿವಾದಿಯರು ನನಗೆ ಹಣ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ಎತ್ತಿ ಹಾಕಿಕೊಳ್ಳಬೇಕೆಂಬ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ